


**ಆಧ್ಯಾತ್ಮಿಕ ಜೀವನದ** ಮೊದಮೊದಲಲ್ಲಿ ತೀರ್ಥಯಾತ್ರೆ, ಕೊರಳಿಗೆ ರುದ್ರಾಕ್ಷಿ ಅಥವಾ ತುಳಸಿಮಾಲೆ, ಮಡಿ—ಇವನ್ನೆಲ್ಲಾ ಆಚರಿಸಬೇಕು. ವಸ್ತುಲಾಭವಾಯಿತೆಂದರೆ, ಭಗವದ್ದರ್ಶನ ದೊರೆಯಿತು ಎಂದರೆ ಬಾಹ್ಯಾಡಂಬರ ಕ್ರಮೇಣ ಕಡಿಮೆಯಾಗಿ ಬಿಡುತ್ತದೆ. ಬಳಿಕ ಉಳಿದುಕೊಳ್ಳುವ ಕೆಲಸ ಆತನ ನಾಮಜಪ ಮತ್ತು ಸ್ಮರಣ ಮನನ ಮಾಡುವುದು.

ಹದಿನಾರು ರೂಪಾಯಿಗಳ ಕಾಸು ದೊಡ್ಡ ಗುಡ್ಡೆಯೇ ಆಗಿ ಬಿಡುತ್ತದೆ. ಅವನ್ನೆಲ್ಲಾ ರೂಪಾಯಿಯಾಗಿ ಪರಿವರ್ತಿಸಿದರೆ, ಆಗ ಅವು ಒಂದು ದೊಡ್ಡ ಗುಡ್ಡೆಯಾಗಿ ಕಾಣುವುದಿಲ್ಲ. ಅವುಗಳಿಗೆ ಬದಲು ಒಂದು ಮೊಹರು ಕೊಂಡುಕೊಂಡರೆ, ಆ ಗುಡ್ಡೆ ಎಂಥ ಪುಟ್ಟ ಅವಸ್ಥೆಗೆ ಬಂದುಬಿಡುತ್ತದೆ. ಆ ಮೊಹರಿಗೆ ಬದಲು ಒಂದು ವಜ್ರ ಕೊಂಡುಕೊಂಡರೆ, ಅದು ಜನರ ಕಣ್ಣಿಗೆ ಬೀಳುವುದೇ ಕಷ್ಟವಾಗುತ್ತದೆ.

ಯೋಗಿಗಳಲ್ಲಿ ಎರಡು ವಿಧ—**ಬಹೂದಕ, ಕುಟೀಚಕ.** ಯಾವ ಸಾಧು ಇನ್ನೂ ತೀರ್ಥಸ್ಥಾನಗಳಿಗೆ ಹೋಗುತ್ತಲೇ ಇದ್ದಾನೊ, ಯಾರ ಹೃದಯದಲ್ಲಿ ಇನ್ನೂ ಶಾಂತಿ ಎಂಬುದು ನೆಲಸಿಲ್ಲವೊ ಆತನೇ ಬಹೂದಕ. ಆದರೆ ಯಾರು ಎಲ್ಲಾ ತೀರ್ಥಯಾತ್ರೆಗಳನ್ನು ಮುಗಿಸಿ ಮನಸ್ಸನ್ನು ಪ್ರಶಾಂತವಾಗಿ ಮಾಡಿಕೊಂಡಿದ್ದಾನೊ ಆತನೇ ಕುಟೀಚಕ. ಆತ ಯಾವುದಾದರೂ ಒಂದು ಜಾಗದಲ್ಲಿ ಕುಟೀರ ಕಟ್ಟಿಕೊಂಡು ಇದ್ದುಬಿಡುತ್ತಾನೆ ಮತ್ತೆ ಅವನು ಸಂಚಾರಕ್ಕೆ ಹೊರಡುವುದಿಲ್ಲ. ಇರುವ ಜಾಗದಲ್ಲೆ ಆತ ಆನಂದದಿಂದಿರುತ್ತಾನೆ. ಆತನಿಗೆ ಇನ್ನು ತೀರ್ಥಯಾತ್ರೆಯ ಆವಶ್ಯಕತೆ ತೋರಿಬರುವುದಿಲ್ಲ. ಒಂದು ಪಕ್ಷ ಆತ ತೀರ್ಥಯಾತ್ರೆಗೆ ಹೋದರೂ ಅದು ಕೇವಲ ಉದ್ದೀಪನಕ್ಕಾಗಿಯೇ.

ತೀರ್ಥಯಾತ್ರೆಗೆ ಹೋಗಿದ್ದಾಗ ಒಮ್ಮೊಮ್ಮೆ ನನಗೆ ಬಹಳ ಕಷ್ಟ ಆಗುತ್ತಿತ್ತು. ಕಾಶಿಯಲ್ಲಿ ಮಥುರಬಾಬುವಿನ ಸಂಗಡ ರಾಜಬಾಬುವಿನ ಬೈಠಕ್‌ಖಾನೆಗೆ ಹೋಗಿದ್ದೆ. ಅಲ್ಲಿ ಅವರು ಪ್ರಾಪಂಚಿಕ ಮಾತುಕತೆ ಶುರು ಮಾಡಿದರು—ಹಣ, ಜಮೀನುದಾರಿ ಇತ್ಯಾದಿಗಳ ವಿಷಯವಾಗಿ. ಅವರ ಮಾತು ಕೇಳಿ ಅಳಲಾರಂಭಿಸಿದೆ. ಆಗ ಭಗವತಿಗೆ ಹೇಳಿದೆ : "ತಾಯೇ! ನನ್ನನ್ನು ಎಲ್ಲಿಗೆ ಕರೆದುಕೊಂಡು ಬಂದಿದ್ದೀಯೆ? ನಾನು ದಕ್ಷಿಣೇಶ್ವರದಲ್ಲಿ ಸುಖವಾಗಿ ಇದ್ದೆನಲ್ಲ" ಎಂಬುದಾಗಿ. ಪ್ರಯಾಗದಲ್ಲೂ ಎಲ್ಲೆಲ್ಲೂ ಇರುವ ರೀತಿಯಲ್ಲೇ ನೋಡಿದೆ—ಅದೇ ತರದ ಕೊಳ, ಅದೇ ಬಗೆಯ ಹುಲ್ಲು, ಅದೇ ವಿಧದ ಮರಗಿಡಗಳು, ಅದೇ ರೀತಿಯ ಹುಣಸೆ ಎಲೆ.

ಆದರೆ ತೀರ್ಥಸ್ಥಾನಗಳಲ್ಲಿ ಉದ್ದೀಪನವುಂಟಾಗುವುದೇನೋ ನಿಜ. ಮಥುರಬಾಬುವಿನೊಡನೆ ಬೃಂದಾವನಕ್ಕೆ ಹೋಗಿದ್ದೆ. ಆತನ ಮನೆಯ ಹೆಂಗಸರೂ ಬಂದಿದ್ದರು. ಹೃದಯನೂ ಬಂದಿದ್ದ. ಕಾಲೀಯದಮನ ಘಟ್ಟವನ್ನು ನೋಡಿದೊಡನೆಯೇ ನನಗೆ ಉದ್ದೀಪನವುಂಟಾಗಿಬಿಡುತ್ತಿತ್ತು. ಸಂಪೂರ್ಣ ಭಾವ ಪರವಶನಾಗಿ ಬಿಡುತ್ತಿದ್ದೆ. ಹೃದು ಮಕ್ಕಳನ್ನು ಹಿಡಿದು ಸ್ನಾನ ಮಾಡಿಸುವ ರೀತಿಯಲ್ಲಿ ನನಗೆ ಅಲ್ಲಿ ಸ್ನಾನ ಮಾಡಿಸುತ್ತಿದ್ದ.

ಸಾಯಂಕಾಲದ ವೇಳೆ ತಿರುಗಾಡಿಕೊಂಡು ಬರಲು ಯಮುನಾ ದಡಕ್ಕೆ ಹೋಗಿ ಬರುತ್ತಿದ್ದೆ. ದನಕರುಗಳು ಹುಲ್ಲುಗಾವಲಿನಿಂದ ಹಿಂದಿರುಗಿ ಬಂದಾಗ ಯಮುನೆಯ ಮರಳು ಗುಡ್ಡೆಗಳ ಮೂಲಕ ಹಾದು ಬರುತ್ತಿದ್ದವು. ಅವು ಕಣ್ಣಿಗೆ ಬಿದ್ದೊಡನೆಯೆ ನನಗೆ ಕೃಷ್ಣನ ಉದ್ದೀಪನವಾಗಿ ಬಿಡುತ್ತಿತ್ತು. "ಕೃಷ್ಣ ಎಲ್ಲಿ? ನನ್ನ ಕೃಷ್ಣ ಎಲ್ಲಿ?" ಎಂದು ಹುಚ್ಚನ ಹಾಗೆ ಕೂಗಿಕೊಳ್ಳುತ್ತಾ ಅವುಗಳ ಹಿಂದೆ ಓಡುತ್ತಿದ್ದೆ.

ತೀರ್ಥಯಾತ್ರೆಗೆ ಹೋಗಿಯೂ ಭಕ್ತಿ ದೊರಕದೆ ಹೋದರೆ, ತೀರ್ಥಯಾತ್ರೆಯ ಫಲ ದೊರಕಿದಂತಾಗುವುದಿಲ್ಲ. ಭಕ್ತಿಯೇ ಸಾರ. ಏಕಮಾತ್ರ ಪ್ರಯೋಜನವಸ್ತು. ಒಮ್ಮೆ ಒಂದು ಹಕ್ಕಿ ಜಹಜಿನ ಧ್ವಜಸ್ತಂಭದ ಮೇಲೆ ಕುಳಿತುಕೊಂಡಿತು. ಜಹಜು ಗಂಗಾಮುಖವನ್ನು ಬಿಟ್ಟು ಸಮುದ್ರದ ಕಪ್ಪು ನೀರನ್ನು ಮುಟ್ಟಿದರೂ ಅದಕ್ಕೆ ತಾನು ಎಲ್ಲಿಗೆ ಮುಂದುವರಿಯುತ್ತಿದ್ದೇನೆ ಎಂಬುದರ ಪ್ರಜ್ಞೆಯೇ ಇರಲಿಲ್ಲ. ತಾನು ಸಮುದ್ರದೊಳಗೆ ಮುಂದುವರಿಯುವುದರ ಅರಿವು ಅದಕ್ಕೆ ಉಂಟಾದೊಡನೇ ಅದು ತೀರ ಯಾವ ದಿಕ್ಕಿನಲ್ಲಿ ಇದೆ ಎಂಬುದನ್ನು ಅರಿಯಲು ಉತ್ತರ ದಿಕ್ಕಿನ ಕಡೆ ಹಾರಿಹೋಯಿತು. ಆ ಕಡೆ ಎಲ್ಲೂ ತೀರ ಕಾಣಿಸದೆ ಹೋದುದರಿಂದ ಹಿಂದಿರುಗಿ ಬಂದು ಧ್ವಜಸ್ತಂಭದ ಮೇಲೆ ಕುಳಿತುಕೊಂಡಿತು. ಅಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ದಕ್ಷಿಣ ದಿಕ್ಕಿನ ಕಡೆ ಹಾರಿಹೋಯಿತು. ಆ ಕಡೆಯೂ ತೀರ ಕಣ್ಣಿಗೆ ಬೀಳಲಿಲ್ಲ. ಏದುತ್ತ ಏದುತ್ತ ಹಿಂದಿರುಗಿ ಬಂದು ಮತ್ತೆ ಧ್ವಜಸ್ತಂಭದ ಮೇಲೆ ಕುಳಿತುಕೊಂಡಿತು. ಮತ್ತೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ನಂತರ ಒಮ್ಮೆ ಪೂರ್ವ ದಿಕ್ಕಿಗೆ, ಇನ್ನೊಮ್ಮೆ ಪಶ್ಚಿಮ ದಿಕ್ಕಿಗೆ ಹಾರಿ ನೋಡಿತು. ಯಾವ ದಿಕ್ಕಿನಲ್ಲಿಯೂ ಯಾವಾಗ ತೀರ ಕಾಣಬರಲಿಲ್ಲವೋ ಆಗ ಅದು ಧ್ವಜಸ್ತಂಭದ ಮೇಲೆ ತೆಪ್ಪಗೆ ಕುಳಿತುಕೊಂಡುಬಿಟ್ಟಿತು.

ಎಲ್ಲಿಯವರೆಗೆ ಭಾವನೆ ಇರುವುದೋ ಭಗವಂತ "ಅಲ್ಲಿ, ಅಲ್ಲಿ" ಎಂಬುದಾಗಿ, ಅಲ್ಲಿಯವರೆಗೆ ಮನುಷ್ಯ ಅಜ್ಞಾನವಶನಾಗಿರುತ್ತಾನೆ. ಆದರೆ ಯಾವಾಗ ಭಾವನೆ ಬರುವುದೊ ಆತ "ಇಲ್ಲಿ, ಇಲ್ಲಿ" ಎಂಬುದಾಗಿ, ಆಗ ಆತನಿಗೆ ಜ್ಞಾನೋದಯವಾಗುತ್ತದೆ. ಒಬ್ಬನಿಗೆ ಗುಡುಗುಡಿ ಸೇದಲು ಇಚ್ಛೆಯಾಯಿತು. ಅದನ್ನು ಹೊತ್ತಿಸಿಕೊಳ್ಳಲು ಆತ ಪಕ್ಕದ ಮನೆಗೆ ಹೋದ. ಆಗಲೇ ಬಹಳ ರಾತ್ರಿಯಾಗಿ ಬಿಟ್ಟಿತ್ತು. ಅವರು ನಿದ್ದೆ ಮಾಡುತ್ತಿದ್ದರು. ಬಹಳ ಹೊತ್ತು ಕದ ತಟ್ಟಿದ ನಂತರ ಒಬ್ಬ ಎದ್ದು ಬಂದು ಬಾಗಿಲು ತೆರೆದ. ಈತನನ್ನು ನೋಡಿ ಆತ ಹೇಳಿದ : "ಏನಯ್ಯಾ, ಏನು ಸಮಾಚಾರ?" ಈತ ಹೇಳಿದ: "ಏನು ಊಹಿಸಲಾರೆಯಾ? ನನಗೆ ಹೊಗೆ ಸೊಪ್ಪಿನ ನಶಾ ಇರುವುದು ನಿನಗೆ ಗೊತ್ತೇ ಇದೆ ಯಲ್ಲ. ಗುಡುಗುಡಿ ಹೊತ್ತಿಸಿಕೊಳ್ಳಲು ಬಂದಿದ್ದೇನೆ." ಆಗ ಆತ ನಕ್ಕು ಹೇಳಿದ: "ಹಾ ಹಾ ಹ್ಹ! ನಿನ್ನ ಬುದ್ಧಿ ಒನಕೆ ಚಿಗುರೆ! ಇಷ್ಟು ಶ್ರಮವಹಿಸಿ ಬಂದದ್ದೂ ಅಲ್ಲದೆ ಜೊತೆಗೆ ಇಷ್ಟೊಂದು ಕದ ತಟ್ಟಿದ್ದೂ ಬೇರೆ! ನಿನ್ನ ಕೈಯಲ್ಲೇ ಉರಿಯುತ್ತಿರೋ ಲಾಟೀನು ಇದೆಯಲ್ಲ!" (ಭಕ್ತರೆಲ್ಲಾ ನಗುತ್ತಿದ್ದಾರೆ.) ಏನು ಬೇಕೋ ಅದು ಹತ್ತಿರವೇ ಇದೆ, ಆದರೂ ಜನ ಅಲ್ಲಿ ಇಲ್ಲಿ ಹುಡುಕುತ್ತಾರೆ.

*ಶ್ರೀರಾಮಕೃಷ್ಣ ವಚನವೇದದಿಂದ*